


# ಸರಯೂ

ವಿದ್ಯಾಕೇಂದ್ರ ವಾರ್ತಾಪತ್ರ

ಸಂಪುಟ–3 ಸಂಚಿಕೆ 12 5115/ವಿಜಯ ಸಂ ಮಾಘ/ಫೆಬ್ರವರಿ 2014 ಪುಟಗಳು : 4


**ಜನವರಿ 26 ಗಣರಾಜ್ಯ ದಿನ**–ಶ್ರೀರಾಮ ವಿದ್ಯಾಕೇಂದ್ರದ ಪ್ರಾಥಮಿಕ ಹಾಗೂ ಪ್ರೌಢಶಾಲಾ ವಿಭಾಗಗಳ ವತಿಯಿಂದ 65ನೇ ವರ್ಷದ ಗಣರಾಜ್ಯೋತ್ಸವವನ್ನು ಆಚರಿಸಲಾಯಿತು.

ಈ ಪ್ರಯುಕ್ತ ವಿದ್ಯಾರ್ಥಿಗಳಿಂದ ಆಕರ್ಷಕ ಪಥ ಸಂಚಲನ ಹಾಗೂ ಘೋಷ್ ಪ್ರದರ್ಶನಗಳು ನಡೆದವು. ವಿದ್ಯಾಸಂಸ್ಥೆಯ ಆಡಳಿತಮಂಡಳಿ ಸದಸ್ಯರು ಹಾಗೂ ಪ್ರಾಥಮಿಕ ಪ್ರೌಢಶಾಲಾ ವಿಭಾಗಗಳ ಮುಖ್ಯಸ್ಥರು, ಶಿಕ್ಷಕ–ಶಿಕ್ಷಕೇತರರು ಉಪಸ್ಥಿತರಿದ್ದರು.



ಜನವರಿ 4 : ಒಡಿಯೂರು ಶ್ರೀಗುರುದೇವದತ್ತ ಸಂಸ್ಥಾನಮ್ ಇದರ ಬೆಳ್ಳಿಹಬ್ಬದ ಪ್ರಯುಕ್ತ ತುಳುಸಂಸ್ಕೃತಿಯನ್ನು ಬಿಂಬಿಸುವ ತುಳುತೇರಿಗೆ ವಿದ್ಯಾಕೇಂದ್ರದಲ್ಲಿ ಭವ್ಯಸ್ವಾಗತ ನೀಡಲಾಯಿತು.

ನಂತರ ನಡೆದ ಸಮಾರಂಭದಲ್ಲಿ ಪೂಜ್ಯ ಸ್ವಾಮೀಜಿ ಆಶೀರ್ವಚನ ನೀಡಿದರು.



**ಹಿರಿಯರೊಂದಿಗೆ ಕಿರಿಯರು :**

ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದು ನಾಡಿನ ಜನತೆಗೆ ಪರಿಚಿತರಾಗಿರುವ ಹಿರಿಯರೊಂದಿಗೆ ನಮ್ಮ ವಿದ್ಯಾರ್ಥಿಗಳು ನಡೆಸಿದ ಅಪರೂಪದ ಸಂವಾದ ಕಾರ್ಯಕ್ರಮ.

ಕ್ರೀಡಾ ಕ್ಷೇತ್ರದಿಂದ ಶಂಕರ ವಿ. ಬೋಳಂತೂರು, ವಿಜ್ಞಾನ ಕ್ಷೇತ್ರದಿಂದ ಬದನಾಜೆ ಶಂಕರ ಭಟ್, ಸಾಹಿತ್ಯ ಕ್ಷೇತ್ರದಿಂದ ಏರ್ಯ ಲಕ್ಷ್ಮೀನಾರಾಯಣ ಆಳ್ವರನ್ನು ಸಂದರ್ಶಿಸಲಾಯಿತು.

ಸಂದರ್ಶನದ ಸಮಗ್ರ ಮಾಹಿತಿಯನ್ನು ಪದವಿಪೂರ್ವ ವಿಭಾಗದ ವಾರ್ಷಿಕ ಸಂಚಿಕೆ ಪ್ರತಿಭಾರಾಮದಲ್ಲಿ ಪ್ರಕಟಿಸಲಾಯಿತು.



ಕ್ರೀಡಾಕ್ಷೇತ್ರದ ಸಾಧಕ ಶ್ರೀ ವಿ. ಶಂಕರ್



ಕೃಷಿ ತಜ್ಞ ಶ್ರೀ ಬದನಾಜೆ ಶಂಕರ ಭಟ್



ತುಳು ಜಾನಪದ ವಿದ್ವಾಂಸ ಶ್ರೀ ಏರ್ಯಲಕ್ಷ್ಮೀನಾರಾಯಣ ಆಳ್ವ

## ಶೈಕ್ಷಣಿಕ ಪ್ರವಾಸ



ಭಾರತ ಭೂಶಿರ ಮಂದಿರ ಸುಂದರಿ, ಭುವನ ಮನೋಹರಿ, ಕನ್ಯಾಕುಮಾರಿಯ ಮಡಿಲಲ್ಲಿ ಪ.ಪೂ. ವಿಭಾಗದ ವಿದ್ಯಾರ್ಥಿಗಳು


ಶ್ರೀರಾಮ ವಿದ್ಯಾಕೇಂದ್ರ ಟ್ರಸ್ಟ್ (ರಿ.)
ಹನುಮಾನ್ ನಗರ, ಕಲ್ಲಡ್ಕ, ಬಂಟ್ವಾಳ ತಾಲೂಕು, ದ. ಕ. 574 222. ದೂ.: 08255–275183
E-mail : info@srvk.org Website : www.srvk.org Fax : 08255-275183

ಚಿಂತನರಶ್ಮಿ

# ಒಳ್ಳೆಯದನ್ನು ಹಂಚಿತಿನ್ನು

ವಿನೋಬಾ ಭಾವೆ ಭೂದಾನ ಚಳುವಳಿಯ ನೇತಾರರು. ಒಮ್ಮೆ ಅವರನ್ನು ಒಬ್ಬರು 'ಬಾಬೂಜಿ, ನಿಮ್ಮ ಈ ಭೂದಾನ ಚಳುವಳಿಗೆ ಪ್ರೇರಣೆ ಹೇಗೆ ಬಂತು?' ಎಂದು ಕೇಳಿದರು. ವಿನೋಬಾಜಿಯವರು ಆಗ ತಮ್ಮ ಬಾಲ್ಯ ನೆನಪಿಸಿಕೊಂಡು ಹೀಗೆ ಹೇಳಿದರು.

'ನಾನು ಬಾಲಕನಾಗಿದ್ದಾಗ ನಮ್ಮ ಮನೆಯ ನೆಲದಲ್ಲಿ ಪಪ್ಪಾಯಿ ಹಣ್ಣಿನ ಬೀಜ ನೆಟ್ಟಿದ್ದೆ. ಕ್ರಮೇಣ ಅದು ಬೆಳೆದು ಮರವಾಯಿತು. ಕಾಯಿಗಳನ್ನು ಬಿಟ್ಟಿತು. ಕಾಯಿಗಳು ಮಾಗಿ, ಹಣ್ಣಾದವು. ಒಂದು ದಿನ ಒಂದು ಹಣ್ಣನ್ನು ಕಿತ್ತು ಅಮ್ಮನ ಬಳಿ ತೆಗೆದುಕೊಂಡು ಹೋದೆ. ಅಮ್ಮ ಈ ಹಣ್ಣನ್ನು ಹೆಚ್ಚಿಕೊಡು ಎಂದೆ. ಆಗ ಆಕೆ 'ಮಗು ಈ ಹಣ್ಣು ಬೇರೆಲ್ಲಿಯಾದರೂ ಬೆಳೆದಿದೆಯೇ ಎಂದು ಕೇಳಿದಳು. ಇಲ್ಲಮ್ಮ, ಇದು ನಮ್ಮ ಮನೆಯಲ್ಲಿ ಮಾತ್ರ ಬೆಳೆದಿದೆ ಎಂದೆ. ಆಗ ಆಕೆ ಹಾಗಾದರೆ ಈ ಹಣ್ಣನ್ನು ನೀನು ಮಾತ್ರ ತಿಂದರೆ ಸಾಲದು, ಎಲ್ಲರಿಗೂ ಹಂಚಿ ತಿನ್ನಬೇಕು. ನಿನ್ನ ಎಲ್ಲ ಗೆಳೆಯರನ್ನು ಕರೆದುಕೊಂಡು ಬಾ ಎಂದಳು. ನಾನು ಹಾಗೇ ಮಾಡಿದೆ. ಎಲ್ಲರೊಡನೆ ಹಂಚಿಕೊಂಡು ಪಪ್ಪಾಯಿ ಹಣ್ಣು ತಿಂದು ಖುಷಿ ಪಟ್ಟೆ. ಬಾಲ್ಯದ ಈ ಘಟನೆ, ಒಂದು ತುಂಡೂ ನೆಲ ಇಲ್ಲದವನಿಗೆ ತುಂಬಾ ಭೂಮಿ ಇರುವವರಿಂದ ನೆಲ ಕೊಡಿಸಬೇಕು ಎಂದು ಪ್ರೇರಣೆ ನೀಡಿತು. ಭೂದಾನದ ಚಳುವಳಿಗೆ ನನ್ನ ತಾಯಿ ಕಲಿಸಿಕೊಟ್ಟ ಹಂಚಿತಿನ್ನುವ ಗುಣವೇ ಕಾರಣ ಎಂದರು. ■

# ಶಿಶುಮಂದಿರ

### ಪುಷ್ಪಾಂಜಲಿ ಕಾರ್ಯಕ್ರಮ : 12–1–2014



ಸ್ವಾಮಿ ವಿವೇಕಾನಂದರ 150ನೇ ವರ್ಷಾಚರಣೆಯ ನಿಮಿತ್ತ ಶ್ರೀರಾಮ ಶಿಶುಮಂದಿರ ಕಲ್ಲಡ್ಕದ ವತಿಯಿಂದ ನೆಟ್ಲ ಮತ್ತು ಅಮ್ಟೂರು ಬಾಲಗೋಕುಲದ ಮಕ್ಕಳಿಂದ ಶ್ರೀಕೃಷ್ಣ ಭಜನಾ ಮಂದಿರ ಅಮ್ಟೂರು ಇಲ್ಲಿ ಪುಷ್ಪಾಂಜಲಿ ಎಂಬ ವಿಶೇಷ ಕಾರ್ಯಕ್ರಮ ನಡೆಯಿತು. ಶ್ರೀಮತಿ ಸಂಪ್ರಿಯಾ ಕುಶಾಲಪ್ಪ ಇವರು ವಿವೇಕಾನಂದರ ಜೀವನ ಸಾಧನೆಯ ಬಗೆಗೆ ವಿವರಿಸಿದರು.

### ಮಕರ ಸಂಕ್ರಾಂತಿ ಆಚರಣೆ :

ದಿನಾಂಕ 14.01.2014ರಂದು ಶ್ರೀರಾಮ ಶಿಶುಮಂದಿರದ ಆಶ್ರಯದಲ್ಲಿರುವ ಇತರ ಶಿಶುಮಂದಿರಗಳಲ್ಲಿ ಮಕರ ಸಂಕ್ರಾಂತಿ ಕಾರ್ಯಕ್ರಮವನ್ನು ಆಚರಿಸಲಾಯಿತು.

### ಶ್ರೀ ಅಕ್ಕಮಹಾದೇವಿ ಶಿಶುಮಂದಿರ, ಬಿ.ಸಿ.ರೋಡು

ಶಿಶುಮಂದಿರದ ವ್ಯವಸ್ಥಾಪಕರಾದ ಲಕ್ಷ್ಮಣ ಅಗ್ರಬೈಲು ಇವರ ಅಧ್ಯಕ್ಷತೆಯಲಿ ಕಾರ್ಯಕ್ರಮ ನಡೆಯಿತು. ಹಬ್ಬದ ಬಗ್ಗೆ ಶ್ರೀರಾಮ ಹಿರಿಯ ಪ್ರಾಥಮಿಕ ಶಾಲೆಯ ಸಹಶಿಕ್ಷಕಿ ಭ॥ ಪ್ರೀತಾ ಇವರು ದಿನದ ಮಹತ್ವವನ್ನು ತಿಳಿಸಿದರು. ಕಾರ್ಯಕ್ರಮದಲ್ಲಿ 25 ಮಕ್ಕಳು ಸೇರಿ ಸುಮಾರು 100 ಜನರು ಪಾಲ್ಗೊಂಡಿದ್ದರು.

### ಶ್ರೀಕೃಷ್ಣ ಶಿಶುಮಂದಿರ ಸಜೀಪ :

ಸಜೀಪ ಆಡಳಿತ ಮಂಡಳಿ ಸದಸ್ಯರಾದ ಶ್ರೀಯುತ ಸುಬ್ರಹ್ಮಣ್ಯ ಭಟ್ ಇವರು ಮಕರ ಸಂಕ್ರಾಂತಿ ಉತ್ಸವದ ಮಹತ್ವ ಉದ್ದೇಶವನ್ನು ತಿಳಿಸಿಕೊಟ್ಟರು. ಕಾರ್ಯಕ್ರಮದಲ್ಲಿ 45 ಮಂದಿ ಭಾಗವಹಿಸಿದ್ದರು.

### ಶ್ರೀರಾಮ ಶಿಶುಮಂದಿರ, ಕಲ್ಲಡ್ಕ

8 ಮಂದಿ ತಾಯಂದಿರು ಪರಿಸರದ 485 ಮನೆಗಳಿಗೆ ತೆರಳಿ ಎಳ್ಳುಬೆಲ್ಲ, ಅರಶಿನ ಕುಂಕುಮ, ಬಳೆ, ಹೂವನ್ನು ನೀಡಿ ಮಕರ ಸಂಕ್ರಾಂತಿಯ ಶುಭಾಶಯವನ್ನು ತಿಳಿಸಿದರು.

ದಿನಾಂಕ 15–1–2014ರಂದು ಕಶೆಕೋಡಿ ಮಾತೃಮಂಡಳಿಯಲ್ಲಿ ಸಂಕ್ರಾಂತಿ ಉತ್ಸವ ಕಾರ್ಯಕ್ರಮವನ್ನು ಆಚರಿಸಲಾಯಿತು. ಭ॥ ಪ್ರೀತಾ ದಿನವಿಶೇಷವನ್ನು ತಿಳಿಸಿದರು.

ದಿನಾಂಕ 17–1–2014 ಶುಕ್ರವಾರ ಶ್ರೀರಾಮ ಶಿಶುಮಂದಿರದ ಮಾತೃಮಂಡಳಿಯಲ್ಲಿ ಸಂಕ್ರಾಂತಿ ಉತ್ಸವ ಕಾರ್ಯಕ್ರಮವನ್ನು ಆಚರಿಸಲಾಯಿತು.

# ಪ್ರಾಥಮಿಕ ಶಾಲೆ

## ಸಾಮೂಹಿಕ ಹುಟ್ಟುಹಬ್ಬ ಮತ್ತು ಪ್ರತಿಭಾ ಪುರಸ್ಕಾರ




ಶ್ರೀರಾಮ ಶಾಲಾ ಪ್ರಾಥಮಿಕ ವಿಭಾಗದ ಭಜನೆ, ಸಾಮೂಹಿಕ ಹುಟ್ಟುಹಬ್ಬ ಮತ್ತು ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಶನಿವಾರ ನಡೆಯಿತು. ಅತಿಥಿಯಾಗಿ ಭಾಗವಹಿಸಿದ್ದ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್,ಕಲ್ಲಡ್ಕ ಇದರ ಮ್ಯಾನೇಜರ್ ಆದ ಜಯರಾಮ ಗೌಡ ಮಾತನಾಡಿ ಬ್ಯಾಂಕಿನ ಜಂಜಾಟದ ಸಮಯದಿಂದ ಒಂದು ಗಂಟೆಗಳ ಕಾಲ ಪುಟಾಣಿ ಮಕ್ಕಳ ಜೊತೆ ಇಂತಹ ಕಾರ್ಯಕ್ರಮದಲ್ಲಿ ಭಾಗವಹಿಸಲು ಅವಕಾಶ ನೀಡಿದ ಶಾಲಾ ಮುಖ್ಯೋಪಾಧ್ಯಾಯರಿಗೆ ಧನ್ಯವಾದ ಹೇಳಿ ಮಕ್ಕಳಿಗೆ ಶುಭ ಹಾರೈಸಿದರು.

ಗೋಳ್ತಮಜಲು ಗಣೇಶ ಮಂದಿರದ ಗೌರವಾಧ್ಯಕ್ಷರು,ನಿಟಿಲೇಶ್ವರ ದೇವಸ್ಥಾನದ ವ್ಯವಸ್ಥಾಪನಾ ಸಮಿತಿಯ ಸದಸ್ಯರಾದ ಶ್ರೀಯುತ ಚಂದ್ರಶೇಖರ್ ಟೈಲರ್ ಮಾತನಾಡಿ ಶಾಲೆಯಲ್ಲಿ ಸಿಗುತ್ತಿರುವ ಶಿಕ್ಷಣದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ಇದರ ಸದುಪಯೋಗ ಪಡೆದು ಉತ್ತಮ ವ್ಯಕ್ತಿಗಳಾಗಿ ಎಂದರು.

ಪ್ರಾಥಮಿಕ ಶಾಲಾಭಿವೃದ್ಧಿ ಸಮಿತಿಯ ಸಹ ಕಾರ್ಯದರ್ಶಿಯಾದ ಜಯರಾಮ್ ರೈ ಮಾತನಾಡಿ ದೀಪ ಬೆಳಕಿನ ಸಂಕೇತ. ಅಂತಹ ದೀಪದಿಂದ ಹುಟ್ಟುಹಬ್ಬ ಆಚರಿಸಿಕೊಳ್ಳುವ ಪುಟಾಣಿಗಳಿಗೆ ಆರತಿ ಬೆಳಗಿ, ಅಕ್ಷತೆ, ತಿಲಕಧಾರಣೆ ಮಾಡಿ ಆಶೀರ್ವದಿಸಿದ್ದು ಕಾರ್ಯಕ್ರಮದ ವಿಶೇಷವಾಗಿತ್ತು. ಇಂತಹ ಶಾಲೆಯಲ್ಲಿ ಕಲಿಯುತ್ತಿರುವ ನೀವೇ ಧನ್ಯರು ಎಂದರು.

ವೇದಿಕೆಯಲ್ಲಿ ಮುಖ್ಯೋಪಾಧ್ಯಾಯರು ಉಪಸ್ಥಿತರಿದ್ದರು. ವಿಜೇತ ವಿದ್ಯಾರ್ಥಿಗಳ ಪಟ್ಟಿಯನ್ನು ಪ್ರೀತಾ ಮಾತಾಜಿ ವಾಚಿಸಿದರು. ಕಾರ್ಯಕ್ರಮಕ್ಕೆ ಚೇತನ ಮಾತಾಜಿ ನಿರೂಪಿಸಿ, ಶೈನಿ ಮಾತಾಜಿ ಸ್ವಾಗತಿಸಿ, ಹರೀಶ್ ಶ್ರೀಮಾನ್ ವಂದಿಸಿದರು.

"ಸರಯೂ" ಸಂಪಾದಕ ಮಂಡಳಿ :

ಸಂಪಾದಕರು, ಮುದ್ರಕರು ಹಾಗೂ ಪ್ರಕಾಶಕರು : ನಾರಾಯಣ ಸೋಮಯಾಜಿ, ಅಧ್ಯಕ್ಷರು, ಶ್ರೀರಾಮ ವಿದ್ಯಾಕೇಂದ್ರ

ಸಹಸಂಪಾದಕರು : ದಿವ್ಯಾಕುಮಾರಿ, ಸುಮಿತ್ರಾ ಎಸ್.ಜಿ., ಅನಿತಾ, ಮಹೇಶ ನೆಟ್ಲ, ಜ್ಯೋತಿ, ಜಯಾನಂದ ಪೆರಾಜೆ

ವ್ಯವಸ್ಥಾಪಕ ಸಂಪಾದಕರು : ಸತೀಶ ಭಟ್, ಶಿವಗಿರಿ ಕಾರ್ಯನಿರ್ವಾಹಕ ಸಂಪಾದಕರು : ಕೃಷ್ಣಪ್ರಸಾದ ಕಾಯರ್‌ಕಟ್ಟೆ ವಿನ್ಯಾಸ : ಕುಶಾಲಪ್ಪ ಅಮ್ಟೂರು

## ಸಂಸ್ಕೃತ ಯುವ ಸಮಾವೇಶ

ಜನವರಿ 26 ಮತ್ತು 27ರಂದು ಮಂಗಳೂರಿನ ಸಂಘನಿಕೇತನದಲ್ಲಿ ಕರ್ನಾಟಕ ಪ್ರಾಂತದ ಸಂಸ್ಕೃತ ಯುವ ಸಮಾವೇಶ ಜರುಗಿದ್ದು ಪ್ರೌಢಶಾಲೆಯಿಂದ 30 ವಿದ್ಯಾರ್ಥಿಗಳು ಮತ್ತು ಇಬ್ಬರು ಅಧ್ಯಾಪಕರು ಭಾಗವಹಿಸಿರುತ್ತಾರೆ.

## ಮಕರ ಸಂಕ್ರಾಂತಿ

ದಿನಾಂಕ 16/01/2014ರಂದು ಮಧುಕರ ಸಭಾಂಗಣದಲ್ಲಿ ಪರಿಸರ ಸಂಘದ ವತಿಯಿಂದ ಮಕರಸಂಕ್ರಾಂತಿ ಉತ್ಸವವನ್ನು ಆಚರಿಸಲಾಯಿತು. 9ನೇ ಪತಂಜಲಿ ತರಗತಿಯ ಆಶಾಲತಾ ಮಕರಸಂಕ್ರಾಂತಿಯ ಆಚರಣೆಯ ಬಗ್ಗೆ ತಿಳಿಸಿದರು. ಆ ಬಳಿಕ ಎಲ್ಲಾ ವಿದ್ಯಾರ್ಥಿಗಳಿಗೆ ಎಳ್ಳು-ಬೆಲ್ಲ ಹಂಚಲಾಯಿತು.

## ಹುತಾತ್ಮರ ದಿನ ಮತ್ತು ಕಾನೂನು ಮಾಹಿತಿ




ದಿನಾಂಕ 30/01/2014ರಂದು ಕಾನೂನು ಸಂಘ ಮತ್ತು ಇತಿಹಾಸ ಸಂಘದ ವತಿಯಿಂದ ಹುತಾತ್ಮರ ದಿನವನ್ನು ಆಚರಿಸಲಾಯಿತು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶ್ರೀಯುತ ಸತೀಶ್‌ಭಟ್ ಶಿವಗಿರಿ ಇವರು ವಿದ್ಯಾರ್ಥಿಗಳಿಗೆ "ಕಾನೂನು ಮಾಹಿತಿ" ನೀಡಿದರು.

## ಯುವದಿನಾಚರಣೆ

ಜನವರಿ 12ರಂದು ವಿವೇಕಾನಂದರ ಜನ್ಮದಿನ. ಅದನ್ನು ಯುವದಿನಾಚರಣೆಯನ್ನಾಗಿ ಆಚರಿಸಲಾಯಿತು. ಆ ಪ್ರಯುಕ್ತ ವಿವೇಕಾನಂದರ ಭಾವಚಿತ್ರಕ್ಕೆ ಎಲ್ಲಾ ವಿದ್ಯಾರ್ಥಿಗಳು ಪುಷ್ಪಾರ್ಚನೆ ಮಾಡಿದರು.

## ವಿಶೇಷ ತರಗತಿಗಳು

2013-14ನೇ ಶೈಕ್ಷಣಿಕ ಸಾಲಿನಲ್ಲಿ ವ್ಯಾಸಂಗ ಮಾಡುತ್ತಿರುವ 10ನೇ ತರಗತಿಯ ಮಕ್ಕಳ ಪರೀಕ್ಷಾ ಪೂರ್ವ ತಯಾರಿ ತರಗತಿಗಳು ಜನವರಿ 20ರಿಂದ ಆರಂಭಗೊಂಡಿತು. ಇಲ್ಲಿ ಬಾಲಕರಿಗೆ ಹಾಗೂ ಬಾಲಕಿಯರಿಗೆ ಪ್ರತ್ಯೇಕ ವಸತಿ ವ್ಯವಸ್ಥೆಯನ್ನು ಕೂಡಾ ಕಲ್ಪಿಸಲಾಗಿದೆ.

## ನೇತಾಜಿ ಸುಭಾಶ್‌ಚಂದ್ರಬೋಸ್‌ರ ಜನ್ಮದಿನ

ದಿನಾಂಕ 23-01-2014 ನೇತಾಜಿ ಸುಭಾಶ್‌ಚಂದ್ರಬೋಸ್‌ರ ಜನ್ಮದಿನಾಚರಣೆಯನ್ನು ಇತಿಹಾಸ ಸಂಘದ ವತಿಯಿಂದ ಆಚರಿಸಲಾಯಿತು. ಮುಖ್ಯ ಅತಿಥಿಗಳಾಗಿ ವಿವೇಕಾನಂದ ಡಿ.ಎಡ್. ಕಾಲೇಜಿನ ಉಪನ್ಯಾಸಕರಾದ ಶ್ರೀ ರಘುರಾಜ್ ಮತ್ತು ಮಂಗಳೂರು ದೈಹಿಕ ಶಿಕ್ಷಣ ಪರಿವೀಕ್ಷಣಾಧಿಕಾರಿ ಉಪಸ್ಥಿತರಿದ್ದರು.

## ಸಂಸ್ಕೃತಿ ಜ್ಞಾನ ಪರಿಚಯ ಪರೀಕ್ಷೆ

ವಿದ್ಯಾಭಾರತಿಯ ಅಖಿಲ ಭಾರತ ಶಿಕ್ಷಾ ಸಂಸ್ಥಾನ್ ವತಿಯಿಂದ ಸಂಸ್ಕೃತ ಜ್ಞಾನ ಪರಿಚಯ ಪರೀಕ್ಷೆಯು ಎಲ್ಲಾ ವಿದ್ಯಾರ್ಥಿಗಳಿಗೆ ಮತ್ತು ಆಚಾರ್ಯರಿಗೆ ಜರುಗಿತು.

## ವಿದ್ಯಾರ್ಥಿವೇತನ ವಿತರಣೆ




ಎಸ್.ಎಸ್.ಎಲ್.ಸಿ. ವಾರ್ಷಿಕ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಸರಕಾರದಿಂದ ಕೊಡುವ ವಿದ್ಯಾರ್ಥಿ ವೇತನವನ್ನು ಕು। ಅಶ್ವಿನಿ ಇವರಿಗೆ ಶಾಲಾ ಮುಖ್ಯೋಪಾಧ್ಯಾಯರ ಸಮ್ಮುಖದಲ್ಲಿ ಶ್ರೀ ಸತೀಶ್ ಶಿವಗಿರಿ ನೀಡಿದರು.

## ಕಥಾಕವನ ರಚನಾ ಕಾರ್ಯಾಗಾರ :




ಶ್ರೀರಾಮ ಪ್ರೌಢಶಾಲೆಯ ಸಾಹಿತ್ಯ ಸಂಘದ ಆಶ್ರಯದಲ್ಲಿ ಒಂದು ದಿನದ ಕಥೆ ಕವನ ರಚನಾ ಕಾರ್ಯಾಗಾರ ನಡೆಯಿತು. ಶ್ರೀರಾಮ ಪ.ಪೂ. ವಿಭಾಗದ ಸಮಾಜಶಾಸ್ತ್ರ ಉಪನ್ಯಾಸಕ ಶ್ರೀ ರಾಜಾರಾಮ ವರ್ಮ ಇವರು ಕವನ ರಚನಾ ಕಮ್ಮಟವನ್ನು ಉದ್ಘಾಟಿಸಿದರು. ಹಿರಿಯ ಸಾಹಿತಿಯಾದ ಶ್ರೀ ಅನಂತ ಪದ್ಮನಾಭ ಬಂಟ್ವಾಳ ಇವರು ಭಗವದ್ಗೀತೆಗೆ ಪುಷ್ಪಾರ್ಚನೆ ಮಾಡುವುದರ ಮೂಲಕ ಈ ಕಾರ್ಯಾಗಾರಕ್ಕೆ ಚಾಲನೆ ನೀಡಿದರು. ಹಾಗೂ ಕಥಾ ರಚನೆಯ ಬಗೆಗೆ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಿದರು. ಶ್ರೀಮತಿ ಸುಧಾ ಜೋಶಿ, ಶ್ರೀ ವಸಂತ ಮಾಧವ ಉಪಸ್ಥಿತರಿದ್ದರು.

## ತಾಳಮದ್ದಲೆ ಕಾರ್ಯಕ್ರಮ



ಸೌರಶಕ್ತಿ ಬಳಕೆಯ ಬಗೆಗೆ ಜಾಗೃತಿ ಮೂಡಿಸುವ ಒಂದು ವಿಶೇಷ ಕಾರ್ಯಕ್ರಮ ಯಸ್-20, ಶ್ರೀರಾಮ ಪ್ರೌಢಶಾಲಾ ವಿಭಾಗದಲ್ಲಿ ನಡೆಯಿತು. ಸಭಾ ಕಾರ್ಯಕ್ರಮದಲ್ಲಿ ಸಂಸ್ಥೆಯ ಸಂಚಾಲಕರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಶ್ರೀ ಆದರ್ಶ ಗೋಖಲೆ ಕಾರ್ಕಳ ಅವರಿಂದ ವಿಶೇಷ ಉಪನ್ಯಾಸ ಕಾರ್ಯಕ್ರಮವೂ ನಡೆಯಿತು. ಬಳಿಕ ಜಿಲ್ಲೆಯ ಪ್ರಸಿದ್ಧ ಕಲಾವಿದರಿಂದ ಯಕ್ಷಗಾನ ತಾಳಮದ್ದಲೆ ಕಾರ್ಯಕ್ರಮ ಎಲ್ಲರ ಮನರಂಜಿಸಿತು.

## ಗಣ್ಯರ ಭೇಟಿ



ದೂರದರ್ಶನದ ಖ್ಯಾತ ನಿರೂಪಕಿಯಾದ ಶ್ರೀಮತಿ ತೇಜಸ್ವಿನಿ ರಮೇಶ್ ವಿದ್ಯಾಸಂಸ್ಥೆಗೆ ಭೇಟಿನೀಡಿ ವಿದ್ಯಾರ್ಥಿಗಳ ಸಾಮೂಹಿಕ ಸರಸ್ವತಿ ವಂದನಾದಲ್ಲಿ ಪಾಲ್ಗೊಂಡರು.

## ಸಾಮೂಹಿಕ ಹುಟ್ಟುಹಬ್ಬ-ಭಜನೆ



ಜನವರಿ ತಿಂಗಳಲ್ಲಿ ಜನಿಸಿದ ವಿದ್ಯಾರ್ಥಿಗಳ ಸಾಮೂಹಿಕ ಹುಟ್ಟುಹಬ್ಬ ದಿನಾಂಕ 28-1-2014ರಂದು ನಡೆಯಿತು. ಕುಟುಂಬ ಪ್ರಬೋಧನ್ ಇದರ ಪ್ರಾಂತ ಪ್ರಮುಖರಾದ ಶ್ರೀ ಸತೀಶ್ ಇವರು ವಿದ್ಯಾರ್ಥಿಗಳಿಗೆ ತಿಲಕವಿಟ್ಟು ಆಶೀರ್ವದಿಸಿದರು.

**ಆತ್ಮೀಯ ಓದುಗರೇ,**

**ಸರಯೂ ಇದು ನಮ್ಮ ವಿದ್ಯಾಸಂಸ್ಥೆಯ ಮಾಸಿಕ ವರದಿಯನ್ನು ಕೆಲವು ವಿಶೇಷತೆಗಳನ್ನು ಈವರೆಗೆ ನಿಮ್ಮೊಂದಿಗೆ ಹಂಚಿಕೊಳ್ಳುತ್ತಾ ಬಂದಿದೆ. ಈ ಸಂಚಿಕೆಯೊಂದಿಗೆ ಸರಯೂನ 3 ಸಂಪುಟಗಳು ಮುಗಿದಿದ್ದು 4ನೇ ಸಂಪುಟಕ್ಕೆ ಪತ್ರಿಕೆ ಕಾಲಿಡಲಿದೆ. ಸಂಚಿಕೆಯ ಬಗೆಗೆ ತಮ್ಮ ಸಲಹೆ-ಸೂಚನೆಗಳಿಗೆ ಸದಾ ಸ್ವಾಗತ.**

**-ಸರಯೂ ಸಂಪಾದಕ ಬಳಗ**

# ಪದವಿಪೂರ್ವ

### 'SCIENTIA – 2014'ರಲ್ಲಿ ಭಾಗಿ :

ಜನವರಿ 6 ಮತ್ತು 7ರಂದು ವಿವೇಕಾನಂದ ಇಂಜಿನಿಯರಿಂಗ್ ಕಾಲೇಜಿನಲ್ಲಿ ನಡೆದ 'scientia – 2014' ಕಾರ್ಯಕ್ರಮದಲ್ಲಿ ನಮ್ಮ ವಿದ್ಯಾರ್ಥಿಗಳು ಭಾಗವಹಿಸಿ ವಿಜ್ಞಾನಕ್ಕೆ ಸಂಬಂಧಿಸಿದ ಸಾಕಷ್ಟು ಮಾಹಿತಿಗಳನ್ನು ಸಂಪನ್ಮೂಲ ವ್ಯಕ್ತಿಗಳಿಂದ ಪಡೆದುಕೊಂಡರು.

### ಶೈಕ್ಷಣಿಕ ಪ್ರವಾಸ :

ಸ್ವಾಮಿ ವಿವೇಕಾನಂದರ 150ನೇ ಜನ್ಮವರ್ಷಾಚರಣೆಯ ಸುಸಂದರ್ಭದಲ್ಲಿ ದಿನಾಂಕ 7–1–14ರಿಂದ 10–1–14ರ ಮೂರು ದಿನಗಳ ಶೈಕ್ಷಣಿಕ ಪ್ರವಾಸವನ್ನು ಕನ್ಯಾಕುಮಾರಿ ಹಾಗೂ ತಿರುವನಂತಪುರದ ಅನಂತಪದ್ಮನಾಭ ಸ್ವಾಮಿ ಕ್ಷೇತ್ರಕ್ಕೆ ಆಯೋಜಿಸಲಾಗಿತ್ತು. ಕನ್ಯಾಕುಮಾರಿಯಲ್ಲಿ ಸೂರ್ಯೋದಯ, ಸೂರ್ಯಾಸ್ತಮಾನ, ವಿವೇಕಾನಂದರ ಶಿಲಾಸ್ಮಾರಕ, ಧ್ಯಾನ ಮಂದಿರ, ಏಕನಾಥ ರಾನಡೆಯವರ ಸ್ಮಾರಕ ಮುಂತಾದವುಗಳನ್ನು ಹಾಗೂ ಜಗತ್ತಿನ ಶ್ರೀಮಂತ ದೇವಾಲಯಗಳಲ್ಲಿ ಒಂದಾದ ತಿರುವನಂತಪುರದ ಅನಂತಪದ್ಮನಾಭ ದೇವಾಲಯವನ್ನು ವೀಕ್ಷಿಸಲಾಯಿತು. ಒಟ್ಟು 70 ವಿದ್ಯಾರ್ಥಿಗಳು ಹಾಗೂ 7 ಉಪನ್ಯಾಸಕರು ಈ ಪ್ರವಾಸದಲ್ಲಿ ಭಾಗವಹಿಸಿದ್ದರು.

### MITE ಭೇಟಿ :

ಮಂಗಳೂರಿನ ತಾಂತ್ರಿಕ ಹಾಗೂ ಇಂಜಿನಿಯರಿಂಗ್ ಸಂಸ್ಥೆ, ಮಿಜಾರು ಮೂಡಬಿದ್ರೆ (MITE), ಇಲ್ಲಿ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ವೃತ್ತಿ ಮಾರ್ಗದರ್ಶನ ಕಾರ್ಯಕ್ರಮದಲ್ಲಿ ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದ 40 ವಿದ್ಯಾರ್ಥಿಗಳು ಭಾಗವಹಿಸಿ ಅಗತ್ಯ ಮಾಹಿತಿಗಳನ್ನು ಪಡೆದುಕೊಂಡರು.

### ರಸಪ್ರಶ್ನೆಯಲ್ಲಿ ತೃತೀಯ :

ಸ್ವಾಮಿ ವಿವೇಕಾನಂದರ 150ನೇ ಜನ್ಮವರ್ಷಾಚರಣೆಯ ಪ್ರಯುಕ್ತ ಪುತ್ತೂರಿನ ವಿವೇಕಾನಂದ ಪದವಿಪೂರ್ವ ಕಾಲೇಜಿನವರು ಹಮ್ಮಿಕೊಂಡಿದ್ದ ವಿವಿಧ ಸ್ಪರ್ಧೆಗಳಲ್ಲಿ ನಮ್ಮ ವಿದ್ಯಾರ್ಥಿಗಳು ಭಾಗವಹಿಸಿದ್ದು, ಅದರಲ್ಲಿ ನವ್ಯಶ್ರೀ(ಪ್ರ.ವಿಜ್ಞಾನ) ಹಾಗೂ ತಂಡ ರಸಪ್ರಶ್ನೆ ಸ್ಪರ್ಧೆಯಲ್ಲಿ ತೃತೀಯ ಸ್ಥಾನ ಪಡೆದಿರುತ್ತಾರೆ.

### SGFIನಲ್ಲಿ ಗಣನೀಯ ಸಾಧನೆ :

ವಿದ್ಯಾಭಾರತಿಯ ಅಖಿಲಭಾರತ ಕ್ರೀಡಾಕೂಟದ ಪೋಲ್‌ವಾಲ್ಟ್ ಸ್ಪರ್ಧೆಯಲ್ಲಿ ಅಕ್ಷಿತ್ ಕೆ (ದ್ವಿ.ಕಲಾ) ಹಾಗೂ ಗುಂಡು ಎಸೆತದಲ್ಲಿ ಅಜಯ್ ಶರ್ಮ(ದ್ವಿ. ವಾಣಿಜ್ಯ) ಪ್ರಥಮ ಸ್ಥಾನ ಗಳಿಸಿ, ಜಾರ್ಖಂಡ್‌ನ ರಾಂಚಿಯಲ್ಲಿ ನಡೆದ SGFI ಕ್ರೀಡಾಕೂಟದಲ್ಲಿ ಗಮನಾರ್ಹ ಸಾಧನೆ ಮಾಡಿರುತ್ತಾರೆ.

### ಮಾಹಿತಿ ಕಾರ್ಯಾಗಾರ :

ವಿಜ್ಞಾನ ಕ್ಷೇತ್ರದಲ್ಲಿ ಕಲಿಕೆಯ ಅವಕಾಶಗಳ ಬಗೆಗೆ ಅದರಲ್ಲೂ ಮೂಲ ವಿಜ್ಞಾನ ಅಧ್ಯಯನದ ಇಂದಿನ ಅನಿವಾರ್ಯತೆಯ ಬಗ್ಗೆ ಬಂಟ್ವಾಳ ಎಸ್.ವಿ.ಎಸ್. ಕಾಲೇಜಿನ ಜೀವಶಾಸ್ತ್ರ ವಿಭಾಗದ ಮುಖ್ಯಸ್ಥರು ಶ್ರೀಮತಿ ಭಾರತಿ ಭಟ್ ಹಾಗೂ ಉಪನ್ಯಾಸಕಿ ಕು| ವಿನಂತಿ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು.

# ಪದವಿ

### ಪಿಂಗಾರ 11–1–2014

ಮಂಗಳೂರಿನ ಶಾರದ ವಿದ್ಯಾಲಯದಲ್ಲಿ ನಡೆದ "ಪಿಂಗಾರ–2014"ರ ತುಳುನಾಡ ಅಂಕ ಆಯನ ಎನ್ನುವ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪದವಿ ಕಾಲೇಜಿನ ವಿದ್ಯಾರ್ಥಿಗಳಾದ ಪ್ರಶಾಂತ್, ಶಿಶಿರ, ವಿಜೇತ್, ಪ್ರವೀಣ್, ಯಜ್ಞೇಶ್, ರವಿಕಿರಣ್, ವಿನುತ, ಸೋನಿಕಾ, ಭಾಗ್ಯಶ್ರೀ, ಭವ್ಯಶ್ರೀ, ಹರ್ಷಿತಾ, ವಿದ್ಯಾಶ್ರೀ ಭಾಗವಹಿಸಿದರು.

### ದುಂಡು ಮೇಜಿನ ಸಭೆ 11–1–2014

'ಸುರಕ್ಷಿತ ಮಹಿಳೆ– ಸ್ವಾಸ್ಥ್ಯ ಸಮಾಜ' ಎಂಬ ವಿಷಯವಾಗಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್, ಇವರು ದಿನಾಂಕ 11–1–1014 ರಂದು ಮಂಗಳೂರು ಎಸ್.ಡಿ.ಎಂ ಕಾಲೇಜಿನ ಸಭಾಂಗಣದಲ್ಲಿ ಆಯೋಜಿಸಿದ್ದ ದುಂಡುಮೇಜಿನ ಸಮ್ಮೇಳನದಲ್ಲಿ ದ್ವಿತೀಯ ಬಿ.ಕಾಂ ವಿದ್ಯಾರ್ಥಿಗಳಾದ ಮಾನಸ ಹಾಗೂ ಭವ್ಯ ಭಾಗವಹಿಸಿದ್ದರು.

### ಸ್ಥಳೀಯ ವಿಚಾರಣಾ ಸಮಿತಿ 17–01–2014

ಮಂಗಳೂರು ವಿಶ್ವವಿದ್ಯಾನಿಲಯ ಸ್ಥಳೀಯ ವಿಚಾರಣಾ ಸಮಿತಿಯು ಭೇಟಿ ಇತ್ತು ವಿದ್ಯಾರ್ಥಿಗಳ ಜೊತೆ ಮಾತನಾಡಿ, ಶಿಕ್ಷಕರ ಜೊತೆ ವಿಚಾರ ವಿನಿಮಯ ನಡೆಸಿದರು. ಇದೇ ಸಂದರ್ಭದಲ್ಲಿ ಗ್ರಂಥಾಲಯವನ್ನು ವೀಕ್ಷಿಸಿ, ಒಟ್ಟು ಕಾಲೇಜಿನ ವ್ಯವಸ್ಥೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಇದೇ ಸಂದರ್ಭದಲ್ಲಿ ಸಂಸ್ಥೆಯ ಸಂಚಾಲಕರಾದ ಡಾ.



ಪ್ರಭಾಕರ್ ಭಟ್ ಹಾಗೂ ಅಧ್ಯಕ್ಷರಾದ ನಾರಾಯಣ ಸೋಮಾಯಾಜಿ ಉಪಸ್ಥಿತರಿದ್ದರು.

### ಪಾರಂಪರಿಕ ಕೂಟ

ಸ್ವಸ್ತಿಶ್ರೀ ಪದವಿಪೂರ್ವ ಕಾಲೇಜು ಮೂಡುಬಿದ್ರೆಯಲ್ಲಿ ನಡೆದ ಪ್ರಾಕೃತ ಅಧ್ಯಯನ ಕಾರ್ಯಗಾರದಲ್ಲಿ ಪದವಿ ಕಾಲೇಜಿನ ವಿದ್ಯಾರ್ಥಿಗಳಾದ ಶ್ರೀ ರಾಮ ಪ್ರಭು, ವಿನೋದ್ ಹಾಗೂ ಉಪನ್ಯಾಸಕಿ ರೇಖಾ ಭಾಗವಹಿಸಿರುತ್ತಾರೆ.

### ಸಂಸ್ಕೃತ ಯುವ ಸಮಾವೇಶ

ಮಂಗಳೂರು ಸಂಘನಿಕೇತನದಲ್ಲಿ, ಸಂಸ್ಕೃತ ಭಾರತಿ ದಕ್ಷಿಣ ಕರ್ನಾಟಕ ಇವರು ದಿನಾಂಕ 26–01–2014 ಮತ್ತು 27–01–2014 ರಂದು ಆಯೋಜಿಸಿದ 2 ದಿನಗಳ ಸಂಸ್ಕೃತ **ಯುವ ಸಮಾವೇಶ**ದಲ್ಲಿ ಪದವಿ ಕಾಲೇಜಿನ ಪ್ರದ್ಯೋತ ಸಂಸ್ಕೃತ ಸಂಘದ 42 ವಿದ್ಯಾರ್ಥಿಗಳು ಪ್ರತಿನಿಧಿಗಳಾಗಿ ಭಾಗವಹಿಸಿರುತ್ತಾರೆ ಹಾಗೂ ವಿದ್ಯಾರ್ಥಿಗಳಿಂದ ಸಂಯೋಜಿಸಿದ ಸಂಸ್ಕೃತ ವಸ್ತು ಪ್ರದರ್ಶಿನಿ ಎಲ್ಲರ ಗಮನ ಸೆಳೆಯಿತು.

### ಕಾಲೇಜು ವಾರ್ಷಿಕ ಕ್ರೀಡಾಕೂಟ

ಶ್ರೀರಾಮ ಪ್ರಥಮ ದರ್ಜೆ ಮಹಾವಿದ್ಯಾಲಯದ 2013–14ನೇ ಸಾಲಿನ ವಾರ್ಷಿಕ ಕ್ರೀಡಾಕೂಟವನ್ನು ಕಲ್ಲಡ್ಕದ ಶ್ರೀ ಲಕ್ಷ್ಮೀ ಗಣೇಶ್ ಹೋಟೇಲ್‌ನ ಮಾಲಕರಾದ ಶ್ರೀ ರಾಜೇಂದ್ರ ಯನ್ ಹೊಳ್ಳ ಅವರು ಕ್ರೀಡಾಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ ನಾನು ಇದೇ ವಿದ್ಯಾಸಂಸ್ಥೆಯ ಹಿರಿಯ ವಿದ್ಯಾರ್ಥಿ, ಇಂದು ಈ ವೇದಿಕೆಯನ್ನು ಹಂಚಿಕೊಂಡುದುದು ನಿಜಕ್ಕೂ ಸಂತಸ ತಂದಿದೆ




ಎಂದರು. ಸಂಸ್ಥೆಯ ಸಂಚಾಲಕರಾದ ಡಾ.ಪ್ರಭಾಕರ ಭಟ್ ಉಪಸ್ಥಿತರಿದ್ದು ಶುಭ ಹಾರೈಸಿದರು. ಕ್ರೀಡಾ ಪ್ರತಿಜ್ಞೆಯನ್ನು ಕ್ರೀಡಾ ಸಂಘದ ಅಧ್ಯಕ್ಷ ಸಂಕೇತ್ ತೃತೀಯ ಬಿಕಾಂ ನೇರವೇರಿಸಿದರು. ವೇದಿಕೆಯಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಕೃಷ್ಣಪ್ರಸಾದ ಕೆ ಯನ್, ಉಪಸ್ಥಿತರಿದ್ದರು. ಉಪನ್ಯಾಸಕರಾದ ಕು ಅಕ್ಷತಾ ಸ್ವಾಗತಿಸಿ, ಕು ಜಯಲಕ್ಷ್ಮೀ ವಂದಿಸಿ, ಕು ಅಮೃತಾ ನಿರೂಪಿಸಿದರು.

"ಸರಯೂ" ಪತ್ರಿಕೆಯ ಬಗೆಗೆ ಹಾಗೂ ವಿದ್ಯಾಕೇಂದ್ರದ ಕಾರ್ಯಚಟುವಟಿಕೆಗಳ ಬಗ್ಗೆ ನಿಮ್ಮ ಅಭಿಪ್ರಾಯಗಳಿಗೆ ಸ್ವಾಗತ. ಈ ಪತ್ರಿಕೆಯ ಪೋಷಕರಾಗಬಯಸುವವರು ರೂ. 1000/–ದ ಡಿ.ಡಿ./ಚೆಕ್‌ನ್ನು ಶ್ರೀರಾಮ ವಿದ್ಯಾಕೇಂದ್ರ ಟ್ರಸ್ಟ್ ಹೆಸರಿನಲ್ಲಿ ಈ ಕೆಳಗಿನ ವಿಳಾಸಕ್ಕೆ ಕಳುಹಿಸಬಹುದು.

**ಸಂಪಾದಕರು, ಸರಯೂ**
**ಶ್ರೀರಾಮ ವಿದ್ಯಾಕೇಂದ್ರ, ಹನುಮಾನ್ ನಗರ, ಕಲ್ಲಡ್ಕ, ದ.ಕ.–574 222.**

ಸವಿಧೇ ತೆರೆದ ಅಂಚೆ

........................................................................

........................................................................

........................................................................